ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦ ಎಕರೆಗೆ ಒಳಪಟ್ಟಂತಹ ಮಾಜಿ ಗೇಣಿದಾರರಿಂದ ಈವರೆಗೆ ವಸೂಲ್ಮಾಡಿದ ಪರಿಹಾರ ಹಣ ಕೆಳಕಂಡಂತಿದೆ.

ತಾಲ್ಲೂಕಿನ ಹೆಸರು	ವಸೂಲ್ಮಾಡಲಾದ ಪರಿಹಾರದ ಮೊತ್ತ	
	೮೫-೮೬	೮೬-೮೭
೧. ಮಂಗಳೂರು	ಇಲ್ಲ	ಇಲ್ಲ
೨. ಪುತ್ತೂರು	—	—
೩. ಬಂಟವಾಳ	—	—
೪. ಬೆಳ್ತಂಗಡಿ	—	—
೫. ಕಾರ್ಕಳ	—	—
೬. ಸಂಕ್	—	—
೭. ಕುಂದಾಪುರ	—	—
೮. ಉಡುಪಿ	—	೫೭೨೧.೫೦

ಆ) ಹತ್ತು ಎಕರೆಗಿಂತ ಹೆಚ್ಚಿಗೆ ಜಮೀನು ಹೊಂದಿರುವ ಮಾಜಿ ಗೇಣಿದಾರರಿಂದ ಬಾಕಿ ಉಳಿದಿರುವ ಪ್ರೀಮಿಯಂ ಹಣವನ್ನು ವಸೂಲು ಮಾಡಲಾಗುವುದು.

ಭೂಮಾಪನ ಕಾರ್ಯ ನಿರ್ವಾಹಕರ ನೌಕರರ ಬೇಡಿಕೆಗಳ ಬಗ್ಗೆ

೮೪೯. (೧) ಶ್ರೀ ಬಿ. ಗಂಗಣ್ಣ.— ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾರೀಖು ೨.೨. ೧೯೮೭ರಂದು ಭೂಮಾಪನ ಕಾರ್ಯ ನೌಕರರು ಬೆಂಗಳೂರಿನಲ್ಲಿ ಮೆರವಣಿಗೆ ಮೂಲಕ ಬಂದು ಸರ್ಕಾರಕ್ಕೆ ಬೇಡಿಕೆಗಳ ಮನವಿ ಸಲ್ಲಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದ ಇತರ ಇಲಾಖೆಗಳ ಸಮಾನ ವರ್ಗದ ನೌಕರರುಗಳ ವೇತನಕ್ಕೂ ಭೂಮಾಪನ ಕಾರ್ಯ ನಿರ್ವಾಹಕರ ವೇತನಕ್ಕೂ ಮೂರನೇ ವೇತನದ ಆಯೋಗದ ವರದಿಯಲ್ಲಿ ನಮೂದಿಸಿರುವ ವೇತನ ವ್ಯತ್ಯಾಸವೇನು ?

ಇ) ಮೇಲ್ಕಂಡ ನೌಕರರ ವೇತನವು ಅವರ ಸಮಾನ ವರ್ಗದ ಇತರ ಇಲಾಖೆ ನೌಕರರ ಸಮಂದೊಗಿಸಲು ಸರಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).-

ಅ)ಹೌದು.

ಆ) ಸರ್ಕಾರದ ಇತರ ಇಲಾಖೆಗಳಲ್ಲಿ ಅರಣ್ಯ ಇಲಾಖೆಯನ್ನು ಹೊರತುಪಡಿಸಿ, ಭೂಮಾಪನ ಕಾರ್ಯ ನಿರ್ವಾಹಕ ಹುದ್ದೆಗಳಿಗೆ ಸಮಾನ ವರ್ಗದ ಹುದ್ದೆಗಳು ಇಲ್ಲದಿರುವುದರಿಂದ, ಭೂಮಾಪನ ಕಾರ್ಯ ನಿರ್ವಾಹಕರ ವೇತನಕ್ಕೂ ಇತರೆ ಇಲಾಖೆಗಳ ಸಮಾನ ವರ್ಗದ ನೌಕರರ ವೇತನಕ್ಕೂ ಇರುವ ವ್ಯತ್ಯಾಸ ಉದ್ಭವಿಸುವುದಿಲ್ಲ. ಅರಣ್ಯ ಇಲಾಖೆಯ ಎರಡನೇ ದರ್ಜೆಯ ಭೂಮಾಪಕರಿಗೂ ಭೂಕಂದಾಯ ಮತ್ತು ಭೂದಾಖಲೆಗಳ ಎರಡನೇ ದರ್ಜೆ ಭೂಮಾಪಕರಿಗೂ ಮೂರನೇ ವೇತನ ಆಯೋಗವು ಸಮಾನ ವೇತನ ಶ್ರೇಣಿಯನ್ನು ಶಿಫಾರಸ್ಸು ಮಾಡಿರುತ್ತದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.